C.R.P.67

Form No.4 (Civil)
Deposition Sheets
(R.P.No.57)

**6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್ ಸಿ ಸಂಖ್ಯೆಃ 166/2020**

**ಪ್ರಾಸಾ. 4 ಚಾಸಾ. 6**

| | | |
|---|---|---|
| **ಸಾಕ್ಷಿದಾರರ ಹೆಸರು** | : | ನರಸಿಂಹಯ್ಯ |
| **ತಂದೆಯ ಹೆಸರು** | : | ಚೌಡಯ್ಯ |
| **ವಯಸ್ಸು** | : | 49 ವರ್ಷಗಳು |
| **ಉದ್ಯೋಗ** | : | ವ್ಯವಸಾಯ |
| **ವಾಸ** | : | ರಾಮನಗರ ತಾಲ್ಲೂಕು. |

**ಪ್ರಮಾಣ ವಚನ ಬೋಧಿಸಿದ ದಿನಾಂಕಃ 03.11.2025**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ಪ್ರಾಸಾ-1 ಮತ್ತು ಚಾಸಾ-5 ರವರು ನನಗೆ ಗೊತ್ತು. ಈಗ ತೋರಿಸಿದ ನಿಶಾನೆ ಪಿ-2 ರಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿಯ ಸಹಿಯನ್ನು ನಿಶಾನೆ ಪಿ-2(ಎ) ಎಂದು ಗುರುತಿಸಲಾಯಿತು. ನಾನು ಸಹಿ ಮಾಡುವಾಗ ಚಾಸಾ-5 ಉಮೇಶ್ ರವರು ಹಾಜರಿದ್ದರು. ದಿನಾಂಕ 10.09.2020 ರಂದು ಪೊಲೀಸರು ನಮ್ಮನ್ನು ಕಗ್ಗಲೀಪುರದ ನವಗ್ರಾಮದ ಮೃತೆ ಗೌರಮ್ಮಳು ವಾಸವಿದ್ದ ಶಾಮನಾಯ್ಕ ಎಂಬುವವರ ಮನೆಗೆ ಕರೆಸಿದ್ದರು. ನಾವು ನೋಡಿದಾಗ ಗೌರಮ್ಮ ನೇಣು ಬಿಗಿದುಕೊಂಡ ಸ್ಥಿತಿಯಲ್ಲಿ ಇದ್ದಳು. ಅವಳ ಕಾಲು ನೆಲಕ್ಕೆ ತಾಕುತಿತ್ತು. ಪೊಲೀಸರು ಮೃತಳ ದೇಹವನ್ನು ರಾಜರಾಜೇಶ್ವರಿ ಆಸ್ಪತ್ರೆಗೆ ಆ್ಯಂಬುಲೆನ್ಸ್ ನಲ್ಲಿ ತೆಗೆದುಕೊಂಡು ಹೋಗಿದ್ದಳು.

ಆಗ ಸಮಯ ಸಂಜೆ 5.30 ರಿಂದ 6.00 ಗಂಟೆ ಆಗಿತ್ತು. ಮೃತೆ ಗೌರಮ್ಮಳ ಮೃತದೇಹವನ್ನು ನಾನು ಗುರುತಿಸುತ್ತೇನೆ. ಸಾಕ್ಷಿ ನಿಶಾನೆ ಪಿ-3 ಮತ್ತು 4 ರಲ್ಲಿ ಮೃತ ಗೌರಮ್ಮಳ ದೇಹವನ್ನು ಗುರುತಿಸುತ್ತಾರೆ.

**ಪಾಟೀ-ಸವಾಲು ಶ್ರೀ ಆರ್.ಆರ್ ವಕೀಲರಿಂದ ಆರೋಪಿಯ ಪರವಾಗಿಃ**

ವಿಷಯ ತಿಳಿದು ನಾವು ಘಟನಾ ಸ್ಥಳಕ್ಕೆ ಹೋದಾಗ 3.30 ರಿಂದ 4.00 ಗಂಟೆ ಆಗಿತ್ತು. ಪ್ರಾಸಾ-3 ಮೂರ್ತಿ ನನಗೆ ಪರಿಚಯ. ಸಂಬಂಧಿಕನೇನಲ್ಲ. ನಾವು ಊರಿನಿಂದ ಘಟನಾ ಸ್ಥಳಕ್ಕೆ 20-30 ಜನ ಹೋಗಿರುತ್ತೇವೆ. ಮೂರ್ತಿ ಅಲ್ಲಿಗೆ ಬಂದಿರುತ್ತಾರೆ. ನಾವು 3.30 ಸಮಯಕ್ಕೆ ಹೋದಾಗ ಪೊಲೀಸರು ಸ್ಥಳದಲ್ಲಿ ಇರಲಿಲ್ಲ. ಆ ನಂತರ ಚಿನ್ನಮ್ಮ, ನಾವು ಎಲ್ಲರೂ ಹೋಗಿ ದೂರು ನೀಡಿರುತ್ತೇವೆ. ಊರಿನವರೆಲ್ಲ ಹೇಳಿದ್ದಕ್ಕೆ ಚಿನ್ನಮ್ಮ ದೂರು ದಾಖಲಿಸಿರುತ್ತಾಳೆ ಎಂದರೆ ಸರಿಯಲ್ಲ. ಗೌರಮ್ಮನವರು ಬದುಕಿದ್ದಾಗ ನಾನು ಮಾತನಾಡಿಸುತ್ತಿದ್ದೆ. ಆಕೆ ತೀರಿಕೊಳ್ಳುವಾಗ ಆಕೆ ರವಿಕುಮಾರನನ್ನು ವಿವಾಹವಾಗಿ 3-4 ವರ್ಷವಾಗಿತ್ತು. ಆಕೆಗೆ ಮಕ್ಕಳು ಇರಲಿಲ್ಲ. ಆಕೆ ಮಕ್ಕಳಿಲ್ಲದಿದ್ದ ಬಗ್ಗೆ ನಾವೇನು ವಿಚಾರಿಸಿರುವುದಿಲ್ಲ. ಆರೋಪಿ ರವಿಕುಮಾರ ಏನು ಕೆಲಸ ಮಾಡುತ್ತಿದ್ದ ಎಂದು ನನಗೆ ಗೊತ್ತಿಲ್ಲ. ಗೌರಮ್ಮಳಿಗೆ ಮಕ್ಕಳಿಲ್ಲದಿದ್ದ ಕಾರಣ ಬೇಸರದಿಂದ ಆತ್ಮಹತ್ಯೆ ಮಾಡಿಕೊಂಡಿರುತ್ತಾಳೆ ಎಂದರೆ ಸರಿಯಲ್ಲ. ಆಕೆಯನ್ನು ಕೊಲೆ ಮಾಡಿ ನೇತು ಹಾಕಿರುತ್ತಾರೆ. ಈ ಬಗ್ಗೆ ನಮಗೆ ಯಾರು ಹೇಳಿರುವುದಿಲ್ಲ. ಆದರೆ ದೇಹವನ್ನು ನೋಡಿದಾಗ ಮೃತಳ ಕಾಲು ನೆಲವನು ತಾಗುತ್ತಿದ್ದ ಕಾರಣ ನಮಗೆ ಹಾಗೆ ಅನ್ನಿಸುತ್ತಿತ್ತು. ಆದ ಕಾರಣ ದೂರು ನೀಡಿರುತ್ತಾರೆ. ರವಿಕುಮಾರನ ಮೇಲಿನ ದ್ವೇಷದಿಂದ ಆತನಿಗೂ, ಮೃತಳ ಸಾವಿಗೂ ಯಾವುದೇ ಸಂಬಂಧ ಇರದೇ ಇದ್ದರು ಆತನ ವಿರುದ್ಧ ಸುಳ್ಳು ಸಂಗತಿಗಳ ಮೇಲೆ ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ನಾವುಊರಿನವರೆಲ್ಲ ಸೇರಿ ಚಿನ್ನಮ್ಮಳ ಕೈಯಲ್ಲಿ ದೂರು ಕೊಡಿಸಿರುತ್ತೇವೆ ಎಂದರೆ ಸರಿಯಲ್ಲ. ನಾವು ಸ್ಥಳಕ್ಕೆ ಹೋಗುವ ಮೊದಲೇ ಪೊಲೀಸರು ಇದ್ದರು ಎಂದರೆ ಸರಿಯಲ್ಲ. ಕಟ್ಟಡ ಮಾಲೀಕರು ಇದ್ದರು. ಕಟ್ಟಡದ ಮಾಲೀಕರು ಒಬ್ಬರು ಶೋಭಾನಾಯ್ಕ ಎನ್ನುವವರು ಇರಬೇಕು. ಗೌರಮ್ಮಳ ಮಕ್ಕಳಾಗದಿದ್ದ ಕಾರಣ ಆತ್ಮಹತ್ಯೆ ಮಾಡಿಕೊಂಡ ಬಗ್ಗೆ ನಮಗೆ

ತಿಳಿದಿದ್ದರು, ಈ ಬಗ್ಗೆ ವೈದ್ಯರು ಸಹ ಹೇಳಿದ್ದರು ನಮಗೆ ಆರೋಪಿಯ ಮೇಲಿನ ದ್ವೇಷದಿಂದ ಚಿನ್ನಮ್ಮಳ ಕೈಯಲ್ಲಿ ದೂರು ಕೊಡಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿ ಮತ್ತು ಗೌರಮ್ಮಳ ವಿವಾಹ ಪ್ರೇಮ ವಿವಾಹವಲ್ಲ. ಅರೆಂಜ್ಡ್ ಮ್ಯಾರೇಜ್ ಆಗಿರುತ್ತದೆ. ಮೃತ ಗೌರಮ್ಮಳ ಮನೆಯವರು ಬಡವರಾದ ಕಾರಣ ಹೆಣ್ಣಿನ ಮನೆಯವರು ಹಾಗೂ ಗಂಡಿನ ಮನೆಯವರು ಸ್ವಲ್ಪ ಸ್ವಲ್ಪ ಜನ ಸೇರಿ ಮದುವೆ ಮಾಡಿರುತ್ತಾರೆ. ಮದುವೆಗೆ ಗೌರಮ್ಮಳ ಸಹೋದರ ಹಾಗೂ ತಂದೆ ಹೋಗಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಬೇರೆ ಎಷ್ಟು ಜನ ಹೋಗಿರುತ್ತಾರೆ, ಅವರ ಹೆಸರುಗಳು ನನಗೆ ಗೊತ್ತಿಲ್ಲ. ಆರೋಪಿ ಹಾಗೂ ಗೌರಮ್ಮ ರವರ ವಿವಾಹ ಪ್ರೇಮ ವಿವಾಹವಾದ ಕಾರಣ ಮೃತಳ ತಾಯಿ ಚಿನ್ನಮ್ಮಳೇ ಮುಂದೆ ನಿಂತು ಅವರಿಬ್ಬರ ವಿವಾಹವನ್ನು ದೇವಸ್ಥಾನದಲ್ಲಿ ಮೃತಳ ತಂದೆ ಮತ್ತು ಸಹೋದರನ ಇಚ್ಚೆಗೆ ವಿರುದ್ಧವಾಗಿ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ಮೃತ ಗೌರಮ್ಮಳ ಮನೆಯ ವಿಚಾರ ನಮಗೇನು ಗೊತ್ತಿಲ್ಲದೇ ಇರುವ ಕಾರಣ ನನಗೆ ಯಾವುದೇ ಸಂಗತಿಗಳು ಗೊತ್ತಿಲ್ಲ, ಮೃತೆ ನಮ್ಮ ಊರಿನವಳು ಎಂಬ ಕಾರಣದಿಂದ ಆರೋಪಿಗೆ ಶಿಕ್ಷೆ ಆಗಲಿ ಎಂಬ ಕಾರಣದಿಂದ ಸುಳ್ಳು ಸಾಕ್ಷ್ಯ ನಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೇ. ಕೇ. ಸ. ಒ.

(ದೇವಾನಂದ)
6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.